**1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್ ಸಿ ನಂಃ- 46/2015**

(ಪ್ರಾ.ಸಾ.19 ಚಾ.ಸಾ.-21 )

ತಾಃ 31-01-2019 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಬಸವರಾಜು |
| ತಂದೆಯ ಹೆಸರು | ಃ | ಚೆನ್ನಬಸವಯ್ಯ |
| ವಯಸ್ಸು | ಃ | 53 ವರ್ಷ |
| ಉದ್ಯೋಗ | ಃ | ಮುಖ್ಯ ಪೇದೆ , ನೆಲಮಂಗಲ ಪೋಲೀಸ್ ವೃತ್ತ ನಿರೀಕ್ಷಕರ ಕಚೇರಿ |
| ವಾಸ ಸ್ಥಳ | ಃ | ನೆಲಮಂಗಲ |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

ನಾನು ಕಳೆದ ಐದು ವರ್ಷಗಳಿಂದ ನೆಲಮಂಗಲ ಪೋಲೀಸ್ ವೃತ್ತ ನಿರೀಕ್ಷಕರ ಕಚೇರಿಯಲ್ಲಿ ಮುಖ್ಯ ಪೇದೆಯಾಗಿ ಕೆಲಸ ಮಾಡುತ್ತಿದ್ದೇನೆ.

ದಿನಾಂಕ 03.03.2014 ರಂದು ನಾನು ಬೆಳಗ್ಗೆ 8 ಗಂಟೆಗೆ ಕರ್ತವ್ಯಕ್ಕೆ ಹಾಜರಾಗಿದ್ದು , ಈ ಪ್ರಕರಣದಲ್ಲಿನ ತನಿಖಾದಿಕಾರಿಗಳಾದ ಚಾಸಾ-27 ಸಿ ಪಿ ಐ ರವರು ಈ ಪ್ರಕರಣದಲ್ಲಿನ ಮೃತನ ಬಾಬ್ತು ಪಿ ಎಂ ವರದಿ ಮತ್ತು ಮೃತನ ಬಟ್ಟೆಗಳನ್ನು ತುಮಕೂರು ಜಿಲ್ಲಾ ಆಸ್ಪತ್ರೆಯ ವೈದ್ಯರಿಂದ ಪಡೆದುಕೊಂಡು ಬರಲು ತಿಳಿಸಿದ್ದರು. ಆ ಪ್ರಕಾರ ನಾನು ಅದೇ ದಿನ ತುಮಕೂರು ಜಿಲ್ಲಾ ಆಸ್ಪತ್ರೆಗೆ ಭೇಟಿ ನೀಡಿ ಮೃತನ ಬಾಬ್ತು ಪಿ ಎಂ ವರದಿ ಮತ್ತು ಪ್ಯಾಕ್ ಸೀಲ್ ಮಾಡಿದ ಮೃತನ

ಬಟ್ಟೆಗಳನ್ನು ವೈದ್ಯರಿಂದ ಪಡೆದುಕೊಂಡು ಚಾ.ಸಾ-27 ರವರ ಮುಂದೆ ತಂದು ಹಾಜರುಪಡಿಸಿದೆನು. ಚಾ.ಸಾ-27 ರವರು ಮೃತನ ಬಟ್ಟೆಗಳನ್ನು ದಾಬಾಸ್‌ಪೇಟೆ ಪೋಲೀಸ್ ಠಾಣೆಯ ಮಾಲು ಪಟ್ಟಿ ಸಂಖ್ಯೆ 28/14 ಕ್ಕೆ ನಮೂದಿಸಿ ಅದಕ್ಕೆ ನನ್ನ ಸಹಿ ಪಡೆದರು. ಈಗ ನನಗೆ ತೋರಿಸುತ್ತಿರುವ ಸದರಿ ಮಾಲುಪಟ್ಟಿ ನೋಡುತ್ತಿದ್ದೇನೆ ಅದರಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆಯನ್ನು ನಿಪಿ-28 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-28(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 1, 4, 5 ಆರೋಪಿತರ ಪರ ಜಿ ಎಸ್ ಬಿ ವಕೀಲರಿಂದ ಃ**

ನನಗೆ ಚಾಸಾ -27 ರವರು ತುಮಕೂರಿಗೆ ಹೋಗಿ ಬರಲು ರಹದಾರಿ ಪತ್ರ ಕೊಟ್ಟಿರಲಿಲ್ಲ, ಆದರೆ ಬಸ್ ವಾರೆಂಟ್ ಕೊಟ್ಟಿದ್ದರು. ನಾನು ತುಮಕೂರು ಜಿಲ್ಲಾ ಆಸ್ಪತ್ರೆಗೆ ಹೋಗಿರಲಿಲ್ಲ ಹಾಗೂ ಯಾವುದೇ ಪಿ ಎಂ ವರದಿ ಮತ್ತು ಮೃತನ ಬಟ್ಟೆಗಳನ್ನು ನನಗೆ ಕೊಟ್ಟಿರಲೇ ಇಲ್ಲ ಎಂದರೆ ಸರಿಯಲ್ಲ. ನಾನು ಮೇಲಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ- 28 ನ್ನು ಸುಳ್ಳು ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ.

**ಪಾಟೀ ಸವಾಲು 2ನೇ ಆರೋಪಿ ಪರ ಶ್ರೀ ವಿ ವಿ ಎಸ್ ವಕೀಲರಿಂದ ಃ-**

(2ನೇ ಆರೋಪಿ ಪರ ವಕೀಲರು 1, 4 ಮತ್ತು 5 ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲಿನಂತೆಯೇ 2ನೇ ಆರೋಪಿ ಪರ ಪಾಟೀ ಸವಾಲು ಇದೆ ಎಂದು ಪರಿಗಣಿಸಲು ಕೇಳಿಕೊಂಡಿರುತ್ತಾರೆ.)

**ಪಾಟೀ ಸವಾಲು 6ನೇ ಆರೋಪಿ ಪರ ಶ್ರೀ ಎಸ್ ವೈ ವಕೀಲರಿಂದಃ-**

(6ನೇ ಆರೋಪಿ ಪರ ವಕೀಲರು 1, 4 ಮತ್ತು 5ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲಿನಂತೆಯೇ 6ನೇ ಆರೋಪಿ ಪರ ಪಾಟೀ ಸವಾಲು ಇದೆ ಎಂದು ಪರಿಗಣಿಸಲು ಕೇಳಿಕೊಂಡಿರುತ್ತಾರೆ.)

{ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.}

ಓ ಹೇ ಸ ಸಹಿ ಮಾಡಿದ್ದಾರೆ.

1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.